ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

ಶ್ರೀ ಹೆಚ್.ಡಿ. ದೇವೇಗೌಡ ವಿರುದ್ಧ ಮೆ || ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ಪ್ರೈಸ್ ಅಮಿಟೆಡ್

ರಿಟ್ ಅರ್ಜಿಸಂಖ್ಯೆ: 725/2021 (ಜಿಎಂ-ಸಿಪಿಸಿ), ದಿನಾಂಕ 15 ನೇ ನವರಿ, 20 1194 ಕರ್ನಾಟಕ ತೀರ್ಪುಗಳ ವರದಿ 2021

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

ಅರ್ಜಿದಾರರು ಸಿವಿಲ್ ದಾವೆಯಲ್ಲಿನ ಮೂಲ ದಾವೆಸಂಖ್ಯೆ: 4545/2012 ಇದರಲ್ಲಿ ಏಕೈಕ ಪ್ರತಿವಾದಿ ಆಗಿರುತ್ತಾರೆ.ಹಾನಿಗೆ ಡಿಕ್ಕಿ ಕೋರಿ ಸಲ್ಲಿಸಿದ ದಾವೆ ಇದಾಗಿದೆ.ಅದು ಆಪಾದಿತ ಮಾನಹಾನಿ ಅಪಕೃತ್ಯದ ಮೇಲೆ ಆಧಾರಿತವಾಗಿದೆ.ಪ್ರತಿವಾದಿಯ ವಾದಿಯ ಸಾಕ್ಷ್ಯವನ್ನು ಪೂರ್ಣಗೊಳಿಸಲಾಗಿದೆ.ತನ್ನ ಸಾಕ್ಷ್ಯ ಎಂ ನೀಡಲು ಅರ್ಜಿದಾರರಿಗೆ ಹಲವಾರು ಸಾರಿ ಅವಕಾಶ ನೀಡಲಾಯಿತು.ಆದರೆ, ಅವರು ಅದನ್ನು ಬಳಸಿಕೊಳ್ಳಲಿಲ್ಲ.ವಿಷಯವನ್ನು ವಾದ ಮಂಡನೆಗೆ ಗೊತ್ತುಪಡಿಸಲಾಯಿತು.ಅರ್ಜಿದಾರರು ವಿಷಯ ಅರ್ಜಿಗಳ ಮೂಲಕ ತಮ್ಮ ಸಾಕ್ಷ್ಯವನ್ನು ನೀಡಬಹುದಾದ ಹಾಗೆ ಮತ್ತೆ ಮತ್ತೆ ಹಾಗೂ ತಡವಾಗಿ ದಾವೆ ಹಂತವನ್ನು ಪುನರ್ ಪ್ರಾರಂಭಿಸಲು ಕೋರಿ, ಅರ್ಜಿ ಸಲ್ಲಿಸಿದ್ದರು.ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ತಮ್ಮ ಆದೇಶದದಿನಾಂಕ: 17.11.2020 ರ (ಅನುಬಂಧ-ಎ) ಮೂಲಕ ಈ ಕೋರಿಕೆಯನ್ನು ನಿರಾಕರಿಸಿದರು.ಹೀಗಾಗಿ ಅರ್ಜಿದಾರರು ಈಗ ಈ ರಿಟ್ ಅರ್ಜಿ ಸಲ್ಲಿಸಿದ್ದಾರೆ.

2. ಅರ್ಜಿದಾರರ ವಕೀಲರ ವಾದವನ್ನು ಕೇಳಿ ಹಾಗೂ ಹಾಗೂ ಅರ್ಜಿಯ ಕಾಗದಪತ್ರಗಳನ್ನು ಅವಲೋಕಿಸಿದ ತರುವಾಯ, ಈ ನ್ಯಾಯಾಲಯವು ಮುಂದಿನ ಕಾರಣಗಳಿಗಾಗಿ ಈ ವಿಷಯದಲ್ಲಿ ವಿಶೇಷಾಧಿಕಾರ ನೀಡಲು ನಿರಾಕರಿಸುತ್ತದೆ:

(ಎ) ದಾವೆಯನ್ನು ಪ್ರತಿವಾದಿಯುದಿನಾಂಕ: 27-6-2012ರಲ್ಲಿ ದಾಖಲಿಸಿದರು.ಆಪಾದಿತ ಮಾನಹಾನಿಯ ಆಧಾರದ ಮೇಲೆ ಅದನ್ನು ಹಾಕಲಾಗಿತ್ತು.ಅರ್ಜಿದಾರರು ಹತ್ತು ಕೋಟಿ ರೂಪಾಯಿ ಮೊತ್ತದ ನಷ್ಟವನ್ನು ಕ್ಲೇಮು ಮಾಡುತ್ತಾರೆ.ದಾವೆಯನ್ನು ಪ್ರತಿರೋಧಿಸಿದಿನಾಂಕ: 13-08-2012ರಂದು ಲಿಖಿತ ವಿವರಣಾ ಪತ್ರ ಸಲ್ಲಿಸಲಾಯಿತು.ವರ್ಷಗಳ ಹಿಂದೆಯೇ ವಿವಾದಾಂಶಗಳನ್ನು ರೂಪಿಸಲಾಗಿದೆ.

ದಿನಾಂಕ:06-02-2019ರಂದು ವಾದಿಯ ಸಾಕ್ಷ್ಯ ಎ ಪೂರ್ಣಗೊಂಡಿತು.ವಿಷಯವನ್ನು ಪ್ರತಿವಾದ ಸಾಕ್ಷ್ಯಕ್ಕಾಗಿದಿನಾಂಕ: 26-2-2019ಕ್ಕೆ ನಿಗದಿಪಡಿಸಲಾಗಿತ್ತು.ಆದರೆ, ಅರ್ಜಿದಾರರು ಹಾಗೂ ಅವರ ವಕೀಲರು ಗೈರುಹಾಜರಾದರು.ಆದ್ದರಿಂದ, ಅವರ ಸಾಕ್ಷ್ಯವನ್ನು ' ಇಲ್ಲ ' ಎಂಬುದಾಗಿ ಪರಿಗಣಿಸಿ ಪ್ರಕರಣವನ್ನು ವಾದಮಂಡನೆಗೆ ಹಾಕಲಾಯಿತು.

ಬಿ) ದಾವೆಯನ್ನು ವಾದ ಮಂಡನೆಗೆ ಗೊತ್ತುಪಡಿಸಿದಾಗ, ಸುಮಾರು ಒಂದು ವರ್ಷಗಳ ನಂತರ ದಾವೆ ಹಂತವನ್ನು ಪುನರ್ ಪ್ರಾರಂಭಿಸುವುದಕ್ಕಾಗಿ ಮತ್ತೆ ವಿಷಯ ಅರ್ಜಿಗಳನ್ನು ಮಂಡಿಸಲಾಯಿತು.ಅದಕ್ಕೆ ಬೆಂಬಲವಾಗಿ ಯಾವುದೇ ಅಫಿಡಾವಿಟ್ಟನ್ನು ಸಲ್ಲಿಸಿಲ್ಲ ಅಥವಾ ಹಾಗೆ ಸಲ್ಲಿಸದಿರಲು ಯಾವುದೇ ಕಾರಣ ನೀಡಿಲ್ಲ.ಏನು ಹೇಳಬೇಕೆಂಬುದು ಅರ್ಜಿದಾರರ ವೈಯಕ್ತಿಕ ತಿಳುವಳಿಕೆಯಾಗಿದ್ದರೂ ಸಹಾ, ಸದರಿ ಅರ್ಜಿಗಳಿಗೆ ಪೂರಕವಾಗಿ ಅರ್ಜಿದಾರರ ದಾಖಲೆಯಲ್ಲಿರುವ ವಕೀಲರು ಮಾತ್ರ ಸಂಗತಿಗಳ ವಿವರಣೆ ಪತ್ರವನ್ನು ಸಲ್ಲಿಸಿದ್ದಾರೆ.ವಾದಕಾಲೀನ ಅರ್ಜಿಸಂಖ್ಯೆ: IX ರಲ್ಲಿರುವ ಅರ್ಜಿಗೆ ಪೂರಕವಾಗಿದಿನಾಂಕ: 28-06-2020ರಂದು ಸಲ್ಲಿಸಿದ ಸದರಿ ಸಂಗತಿಗಳ ವಿವರಣೆ ಪತ್ರದ ಕಂಡಿಕೆ 3 ಈ ಮುಂದಿನಂತಿದೆ:

“66 ಈಗಾಗಲೇ ನಿವೇದಿಸಿಕೊಂಡಿರುವಂತೆ, ಪ್ರತಿವಾದಿಯು ವಯೋವೃದ್ಧ ರಾಜಕಾರಣಿ ಆಗಿರುತ್ತಾರೆ ಹಾಗೂ ಭಾರಿ ಗಾತ್ರದ ದಾಖಲೆಗಳನ್ನು ಒಳಗೊಂಡಿರುವ ಈಗಾಗಲೇ ಸಿದ್ಧಪಡಿಸಲಾಗಿರುವ ಸಾಕ್ಷ್ಯವನ್ನು ಓದಲು ಅವರ ಆರೋಗ್ಯ ಸರಿಯಿಲ್ಲದ ಕಾರಣ ಸಾಕಷ್ಟು ಸಮಯ ನೀಡಲಾಗುತ್ತಿಲ್ಲ.ಪ್ರತಿವಾದಿಯ ಮೊಕದ್ದಮೆಯನ್ನು

ಸಾಬೀತುಪಡಿಸಲು, ವಾದಿಯ ಆರೋಪಗಳನ್ನು ಅಲ್ಲಗಳೆಯಲು ಎಲ್ಲ ದಾಖಲೆಗಳನ್ನು ಈ ನ್ಯಾಯಾಲಯದ ಮು ಂ ದೆ ಒದಗಿಸಬೇಕಾಗುತ್ತದೆ."

ಮಾನ್ಯ ನ್ಯಾಯಾಲಯದ ಮುಂದೆ ಸತ್ಯವನ್ನು ಸಾಬೀತುಪಡಿಸಲು ವಾದಿಯ ಪತ್ರಗಳು, ದಾವೆ ಹಾಗೂ ಇತರ ವಿಷಯಗಳನ್ನು ಹಾಜರುಪಡಿಸಬೇಕಾಗುತ್ತದೆ. ಸಂವಿಧಾನದತ್ತವಾಗಿ ಖಾತರಿಪಡಿಸಲಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ವಾದಿಯ ಉದ್ದೇಶವನ್ನು, ಮಾನ್ಯ ನ್ಯಾಯಾಲಯದ ಮುಂದೆ ಸಾಬೀತುಪಡಿಸ ಬೇಕಾಗುತ್ತದೆ.ಪ್ರತಿವಾದ ಸಾಕ್ಷ್ಯವನ್ನು ನಡೆಸಲು ಹಿಂದೆ ನೀಡಲಾದ ವಿಪುಲ ಅವಕಾಶಗಳನ್ನು ಬಳಸಿಕೊಳ್ಳದಿರುವುದಕ್ಕೆ ಅರ್ಜಿದಾರರ ಪರವಾಗಿ ಮೇಲಿನಂತೆ ದಾಖಲೆಯ ಮೇಲೆ ವಕೀಲರು ನೀಡಿದ ವಿವರಣೆಯು ಉಚಿತವೆ ಂ ದು ತೋರುತ್ತಿಲ್ಲವೆಂದು ಹೇಳಬೇಕಾಗಿಲ್ಲ.

ಸಿ) ಅಧಿವಿಚಾರಣಾ ನ್ಯಾಯಾಧೀಶರು ಸಂತೋಷವಾಗಿ ಅಲ್ಲದಿದ್ದರೂ, ಈ ಮುಂದಿನ ಕಾರಣಗಳೊಂದಿಗೆ ಪ್ರಶ್ನಿತ ಆದೇಶ ಮಾಡಿದ್ದಾರೆ.

66 "ಪ್ರತಿವಾದಿಯಿ ಂ ದಾದ ಹಾನಿಯನ್ನು ಕೋರಿ ವಾದಿಯು ಈ ದಾವೆಯನ್ನು ಹೂಡಿದ್ದು, ಅದರಲ್ಲಿ ವಿಷಯವನ್ನು ಪ್ರತಿವಾದಿಯ ಸಾಕ್ಷ ಕ್ಷ್ಯಕ್ಕೆ ಗೊತ್ತುಪಡಿಸಲಾಗಿತ್ತು.ಆದರೆ ಪ್ರತಿವಾದಿ ಗೈರು ಹಾಜರಾಗಿದ್ದಾರೆ.ಆದ್ದರಿಂದ ಪ್ರತಿವಾದಿಗಳ ಸಾಕ್ಷ್ಯವನ್ನು ' ಇಲ್ಲ ' ಎಂದು ಪರಿಗಣಿಸಲಾಗಿದೆ ಹಾಗೂ ಈಗ ವಿಷಯವನ್ನು ವಾದ ಮಂಡನೆಗಾಗಿ ಗೊತ್ತುಪಡಿಸಿದಾಗ, ಪ್ರತಿವಾದಿಯು ಪ್ರತಿವಾದಿಯ ಸಾಕ್ಷ್ಯ ಎ ನೀಡುವ ಹಂತವನ್ನು ಪುನರ್ ಪ್ರಾರಂಭಿಸಲು ಕೋರಿ ಮತ್ತೊಮ್ಮೆ ವಾದಕಾಲೀನ ಅರ್ಜಿಸಂಖ್ಯೆ: VIII ಮತ್ತು IX ನ್ನು ದಾಖಲಿಸಿದ್ದಾರೆ.ವಾದಕಾಲೀನ ಅರ್ಜಿಸಂಖ್ಯೆ: VIII ಮತ್ತು IX ರ ಬೆಂಬಲವಾಗಿ ಸಲ್ಲಿಸಲಾದ ಸಂಗತಿಗಳ ವಿವರಣ ಪತ್ರದಲ್ಲಿ, ವಿಚಿತ್ರ ಪರಿಸ್ಥಿತಿಗಳಿಂದಾಗಿ, ಪ್ರತಿವಾದಿಯು ತನ್ನ ಸಾಕ್ಷ್ಯ ನೀಡಲಾಗಲಿಲ್ಲ. ದಾಖಲೆಗಳನ್ನು ಪರಿಶೀಲಿಸಿದಾಗ, ವಿಷಯವನ್ನು ಪ್ರತಿವಾದಿಯ ಸಾಕ್ಷ್ಯಕ್ಕಾಗಿದಿನಾಂಕ: 6-02-2019ಕ್ಕೆ ಗೊತ್ತುಪಡಿಸಲಾಗಿದ್ದರೂ, ಪ್ರತಿವಾದಿ ಹಾಗೂ ಅವರ ವಕೀಲರು ಗೈರುಹಾಜರಾಗಿರುವುದು ಕಂಡು ಬರುತ್ತದೆ.ದಿನಾಂಕ: 06-02-2019ರಂದು ಪ್ರತಿವಾದಿಯ ಸಾಕ್ಷ್ಯವನ್ನು ಮುಕ್ತಾಯ ಗೊಳಿಸಲಾಯಿತು.ಅನಂತರದಿನಾಂಕ: 03-06-2019ರಂದು ಪ್ರತಿವಾದಿಯು ಸಾಕ್ಷ್ಯದ ಹಂತವನ್ನು ಪುನರ್ ಪ್ರಾರಂಭಿಸಲು ವಾದಕಾಲೀನ ಅರ್ಜಿಸಂಖ್ಯೆ: V ಮತ್ತು VI ನ್ನು ದಾಖಲಿಸಿದ್ದಾರೆ; ಸದರಿ ಅರ್ಜಿಗಳನ್ನು ಪುರಸ್ಕರಿಸಿ, ಸಾಕ್ಷ್ಯವನ್ನು ಹಾಜರುಪಡಿಸಲು ಪ್ರತಿವಾದಿಗೆ ಮತ್ತೊಮ್ಮೆ ಆದೇಶ ನೀಡಲಾಯಿತು; ನಾಲ್ಕು ಬಾರಿ ಮುಂದೂಡಿದರೂ ಸಹ, ತನ್ನ ಸಾಕ್ಷ್ಯ ನೀಡಲು ಪ್ರತಿವಾದಿ ಎ ವಿಫಲರಾಗಿದ್ದಾರೆ.ಮತ್ತೆದಿನಾಂಕ: 07-09-2018ರಂದು ಅದರ ಕಡೆಯ ವಾದವನ್ನು ಮುಕ್ತಾಯಗೊಳಿಸಲಾಯಿತು.ಅನಂತರ, ಪ್ರತಿವಾದಿಯು ಹಂತವನ್ನು ಪ್ರಾರಂಭಿಸಲು ವಾದಕಾಲೀನ ಅರ್ಜಿಸಂಖ್ಯೆ: VII ದಾಖಲಿಸಿದರು.ಆಗ* 2,000/-ರೂಪಾಯಿಗಳ ವೆಚ್ಚ ವಿಧಿಸಿದಿನಾಂಕ: 31-10-2019ರಂದು ಸದರಿ ಅರ್ಜಿಯನ್ನು ಪುರಸ್ಕರಿಸಲಾಯಿತು.ಅಷ್ಟೇಲ್ಲಾ ಆದ ನಂತರವೂ, ಮತ್ತೆ ಪ್ರತಿವಾದಿಯು ತನ್ನ ಸಾಕ್ಷ್ಯ ಒದಗಿಸುವಲ್ಲಿ ವಿಫಲರಾಗಿದ್ದಾರೆ ಹಾಗೂ ಸರಿಸುಮಾರು ಒಂದು ವರ್ಷದ ನಂತರ, ಮತ್ತೆ ಪ್ರತಿವಾದಿಯು ಪ್ರಸ್ತುತದ ವಾದಕಾಲೀನ ಅರ್ಜಿಸಂಖ್ಯೆ: VIII ಮತ್ತು IX ನ್ನು ದಾಖಲಿಸಿದ್ದಾರೆ.ಇದರಿಂದ ಪ್ರತಿವಾದಿಯು ವ್ಯವಹರಣೆಯನ್ನು ಗಂಭೀರವಾಗಿ ತೆಗೆದುಕೊಂಡಿಲ್ಲವೆಂಬುದನ್ನು ಹಾಗೂ ವಿಷಯವನ್ನು ಎಳೆದುಕೊಂಡು ಹೋಗುವ ಉದ್ದೇಶದಿಂದ ಮಾತ್ರ ಈಗ ಸಲ್ಲಿಸಿರುವಂತೆಯೇ ಅರ್ಜಿ ಸಲ್ಲಿಸುವ ಸ್ವಭಾವ ಹೊಂದಿದ್ದಾರೆ ಎಂದು ತೋರಿಸುತ್ತದೆ.ಆದ್ದರಿಂದ ಪ್ರತಿವಾದಿಯು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿರುವುದು ಅವಶ್ಯವಾಗಿದೆ ".

ಆದೇಶ ಪತ್ರದಲ್ಲಿ ಕಂಡು ಬಂದಿರುವ ಅಂಶಗಳ ಆಧಾರದ ಮೇಲೆ ಅರ್ಜಿದಾರರು ದಾವೆಯನ್ನು ಎಳೆದುಕೊಂಡು ಹೋಗುತ್ತಿದ್ದಾರೆ ಎಂಬ ಅಭಿಪ್ರಾಯಕ್ಕೆ ನ್ಯಾಯಾಧೀಶರು ಬಂದಿದ್ದಾರೆ; ಅದರ ಬಗ್ಗೆ ಸಂಶಯಪಡಲು ಕಾರಣ ಇಲ್ಲ. ಇಂತಹ ವಿಷಯಗಳಲ್ಲಿ ರಿಟ್ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯಗಳ ಮಾನ್ಯ ನ್ಯಾಯಾಧೀಶರು ನೀಡಿದ ಅಭಿಪ್ರಾಯಗಳ ಬಗ್ಗೆ ಮತ್ತೆ ಮತ್ತೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ೧ ಅವಶ್ಯಕತೆ ಇಲ್ಲ.

(ಡಿ) ಮಾನಹಾನಿ ಅಪಕೃತ್ಯದಂತಹ ದಾವೆಗಳನ್ನು ಸಾಧ್ಯವಾದಷ್ಟು ಬೇಗ ವಿಚಾರಣೆ ನಡೆಸುವ ಅವಶ್ಯಕತೆ ಇದೆ. ಯಾರೇ ವ್ಯಕ್ತಿಗೆ ವೈಯಕ್ತಿಕವಾಗಲಿ ಅಥವಾ ವೃತ್ತಿಪರವಾಗಲಿ, ಘನತೆಯು ಪವಿತ್ರವಾದುದು.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಘನತೆಯ ಹಕ್ಕು, ಭಾರತ ಸಂವಿಧಾನದ 21 ನೇ ಅನುಚ್ಛೇದದ ಒಂದು ಭಾಗ ಎಂದು ನಿರ್ಣಯಿಸಿದೆ, ಸಾರ್ವಜನಿಕರ ಜ್ಞಾಪಕಶಕ್ತಿಯು ತುಂಬಾ ಕಡಿಮೆ ಇರುವುದರಿಂದ ಘನತೆಗೆ ಧಕ್ಕೆ ತರುವ

ಕ್ಷೇಮನ್ನು ತ್ವರಿತವಾಗಿ ನಿರ್ವಹಿಸಬೇಕು, ಸ್ಪಷ್ಟವಾಗಿ ಹೇಳುವುದಾದರೆ, ಜನರ ನೆನಪಿನಿಂದ ಅಳಿಸಿ ಹೋಗುವುದಕ್ಕೆ ಮೊದಲು ಅವುಗಳನ್ನು ನಿರ್ಣಯಿಸಿದರೆ ಉತ್ತಮ ಎಂದು ಅಭಿಪ್ರಾಯಪಟ್ಟಿರುತ್ತದೆ.ಮಾನನಷ್ಟ ಮೊಕದ್ದಮೆಗಳಲ್ಲಿ, ಹಣದ ರೂಪದಲ್ಲಿ ನೀಡುವ ನಷ್ಟವು, ಅನುಭವಿಸಿದ ನೋವಿಗೆ ಪೂರ್ಣವಾಗಿ ನಷ್ಟ ಪರಿಹಾರವಾದಂತಾಗುವುದಿಲ್ಲ; ನ್ಯಾಯ ವಿಳಂಬದಿಂದ ಅದು ಇನ್ನೂ ಹೆಚ್ಚು ಹಾಳಾದಂತಾಗುತ್ತದೆ.ಅಂತಹ ದಾವೆಗಳನ್ನು ತ್ವರಿತವಾಗಿ ವಿಚಾರಣೆ ಚ ಮಾಡಲು ಇದು ಒಂದು ಕಾರಣ.ಅನಿರ್ದಿಷ್ಟಾವಧಿಗೆ ಅವುಗಳನ್ನು ಎಳೆದುಕೊಂಡು ಹೋಗಲು ಅವರಿಗೆ ಅವಕಾಶ ಕೊಡಬಾರದು.ಈ ಒಂದು ವಿಷಯದಿಂದಾಗಿ, ವಿಚಾರಣಾ ನ್ಯಾಯಾಧೀಶರು ಈ ನಿರ್ಣಯಕ್ಕೆ ಬರುವಂತಾಗಿದ್ದು, ಮಾಡಿದ್ದು, ಪ್ರಶ್ನಿತ ಆದೇಶವನ್ನು ಪ್ರಶ್ನಿಸುವಂತಿಲ್ಲ.

ಇ) ಬೇರೊಂದು ಕಾರಣಕ್ಕೆ ಸಹ ಪ್ರಶ್ನಿತ ಆದೇಶವನ್ನು ತಪ್ಪು ಎಂದು ಹೇಳಲಾಗುವುದಿಲ್ಲ.ಅಧಿವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ತರ್ಕ ಮತ್ತು ನ್ಯಾಯದ ನಿಯಮಾವಳಿಗೆ ಅನುಸಾರವಾಗಿ ತಮ್ಮ ವಿವೇಚನೆ ಬಳಸಿ ಪ್ರಶ್ನಿತ ಆದೇಶವನ್ನು ಮಾಡಿದ್ದು, ಅದು ಸಾಧನ ಲೋದ್ -ವಿರುದ್ಧ-ನ್ಯಾಷನಲ್ ಇನ್ಶೂರನ್ಸ್ ಕಂ ಅಮಿಟೆಡ್ ಮತ್ತು ಮತ್ತೊಬ್ಬರು 1 ' ಮೊಕದ್ದಮೆಯ 227 ನೇ ಅನುಚ್ಛೇದದ ಮೂಲಕ ತನ್ನಲ್ಲಿ ಸಾಂಧಾನಿಕವಾಗಿ ನಿಹಿತವಾದ ಪರಿಮಿತ ಮೇಲ್ವಿಚಾರಣಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, ರಿಟ್ ನ್ಯಾಯಾಲಯದಿಂದ ಆಳವಾಗಿ ಪರಿಶೀಲನೆಗೆ ಅರ್ಹವಾಗುವುದಿಲ್ಲ.

1. (2003) 3 ಎಸ್ಸಿಸಿ 524

ಮೇಲಿನ ಪರಿಸ್ಥಿತಿಗಳಲ್ಲಿ ಈ ರಿಟ್ ಅರ್ಜಿಗೆ ಗುಣಾರ್ಹತೆ ಇಲ್ಲದಿರುವುದರಿಂದ ಆರಂಭದಲ್ಲಿಯೇ ತಿರಸ್ಕರಿಸಲು ಅರ್ಹವಾಗಿದೆ ಹಾಗೂ ತದನುಸಾರವಾಗಿ ಹಾಗೆ ಮಾಡಲಾಗಿದೆ. ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಒಂಭತ್ತು ತಿಂಗಳೊಳಗಾಗಿ ದಾವೆಯನ್ನು ವಿಲೆ ಮಾಡಬೇಕೆಂದು, ವಿನಂತಿಸಲಾಗಿದೆ ಮತ್ತು ಪಕ್ಷಕಾರರ ಎಲ್ಲಾ ವಾದಗಳನ್ನು ಹಾಗೆಯೇ ಮುಕ್ತವಾಗಿ ಇರಿಸಲಾಗಿದೆ. ಈ ಆದೇಶದ ಪ್ರತಿಯನ್ನು ಈ ಕೂಡಲೇ ಮಾನ್ಯ ನ್ಯಾಯಾಧೀಶರಿಗೆ ಕಳುಹಿಸಲು ರಿಜಿಸ್ಟ್ರಿಯವರಿಗೆ ನಿರ್ದೇಶಿಸಲಾಗಿದೆ.